# ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ, ನಗರ ವಲಯ ಬೆಳಗಾವಿ.

ಸಂಖ್ಯೆ:ಇ7/ಖಾಪ್ರಾಶಾ/ಪೋದಾರ/ಹಿ ಪ್ರಾ ಶಾ/ಮಾನ್ಯತೆ /2016-17/2019 ದಿನಾಂಕ: 18/3/2017.

-: ಜ್ಞಾಪನ :-

ವಿಷಯ: ಪೋದಾರ ಇಂಟರನ್ಯಾಶನಲ್ ಸ್ಕೂಲ 1139/1 ರಿಂದ 1139/3 ಏರಪೋರ್ಟ ರೋಡ, ಬೆಳಗಾವಿ ಈ ಶಾಲೆಗೆ ಮನ್ನಣೆ ಕುರಿತು.

ಉಲ್ಲೇಖ: 1) ಮಾನ್ಯ ಆಯುಕ್ತರು ಸಾ.ಶಿ.ಇ ಬೆಂಗಳೂರು ಇವರ ಸೂತ್ತೋಲೆ ಸಂಖ್ಯೆ:ಸಿ8(8) ಶಾ.ಸಿ.ಅ-10/ಕ.ವಿಭಾಗ ಶಾ.ಸಿ.ಅ-10/ಕ.ವಿಭಾಗ-01-02 ದಿ: 17-8-2002

2) ಮಾನ್ಯ ಸರ್ಕಾರದ ಕಾರ್ಯದರ್ಶಿಗಳು ಶಿಕ್ಷಣ ಇಲಾಖೆ ಬೆ೦ಗಳೂರು ಇವರ ಪತ್ರ ಸ೦:ಇಡಿ:ವಿಧ/2005 ದಿನಾ೦ಕ: 2-11-2006.

3) ಮಾನ್ಯ ಆಯುಕ್ತರು ಸಾ.ಶಿ.ಇ ಬೆಂಗಳೂರು ಇವರ ಸೂತ್ತೋಲೆ ಸಂಖ್ಯೆ: ಸಿ(7)2/ ಪ್ರಾಶಿಅ/ದಾಖಲಾತಿ/ 64/ 2013-14 ದಿನಾಂಕ: 7/1/2014.

4) ಕಾರ್ಯದರ್ಶಿಗಳು, ಪೋದಾರ ಎಜ್ಯುಕೇಶನ್ ಟ್ರಸ್ಟ ಬೆಂಗಳೂರು ಇವರ ಪತ್ರ ದಿನಾಂಕ: 31/12/2016,

5) ಈ ಕಚೇರಿ ಪತ್ರ ಸಂಖ್ಯೆ ಇ7/ಖಾಪ್ರಾಶಾ/ಪೋದಾರ/ಹಿ ಪ್ರಾ ಶಾ/ಮಾನ್ಯತೆ /2016-17/270 ದಿನಾಂಕ: 6/6/2016.

*****

ಪೋದಾರ ಎಜ್ಯುಕೇಶನ್ ಟ್ರಸ್ಟ ಬೆಂಗಳೂರು, ಈ ಸಂಸ್ಥೆಯ ವತಿಯಿಂದ ನಡೆಯುತ್ತಿರುವ ಪೋದಾರ ಇಂಟರನ್ಯಾಶನಲ್ ಸ್ಕೂಲ 1139/1 ರಿಂದ 1139/3 , ಏರಪೋರ್ಟ ರೋಡ, ಬೆಳಗಾವಿ ಈ ಶಾಲೆಗೆ ಮನ್ನಣೆ ಕುರಿತು ಉಲ್ಲೇಖ 4 ರನ್ವಯ ಸಲ್ಲಿಸಿದ ಪ್ರಸ್ತಾವನೆಯನ್ನು ಉಲ್ಲೇಖಿತ ಸರಕಾರದ ಆದೇಶ ಹಾಗೂ ಆಯುಕ್ತರ ಸುತ್ತೋಲೆಗಳನ್ವಯ ಪರಿಶೀಲಿಸಲಾಯಿತು. ಶಿಕ್ಷಣ ಕಾಯ್ದೆಯಂತೆ ರಚಿಸಲಾಗಿರುವ 1999 ರ ಮನ್ನಣೆ ನಿಯಮಗಳನ್ವಯ ಈ ಕೆಳಗೆ ಕಾಣಿಸಿದ ಷರತ್ತುಗಳಿಗೊಳಪಟ್ಟು ಕರ್ನಾಟಕ ಶಿಕ್ಷಣ ಮಸೂದೆ ನಿಯಮ 3 ರನ್ವಯ ಶಾಶ್ವತ ಅನುದಾನ ರಹಿತವಾಗಿ ಮನ್ನಣೆ ನವೀಕರಿಸಿದೆ.

| ಕ್ರ ಸಂ | ಸಂಸ್ಥೆಯ ಹೆಸರು ಹಾಗೂ ಶಾಲೆಯ ಹೆಸರು ಮತ್ತು ವಿಳಾಸ | ವರ್ಗ | ಮಾಧ್ಯಮ | ಮನ್ನಣೆ ನೀಡಿದ ವಿವರ |
|---|---|---|---|---|
| 1 | ಪೋದಾರ ಎಜ್ಯುಕೇಶನ್ ಟ್ರಸ್ಟ ಬೆಂಗಳೂರು, ಈ ಸಂಸ್ಥೆಯ ವತಿಯಿಂದ ನಡೆಯುತ್ತಿರುವ ಪೋದಾರ ಇಂಟರನ್ಯಾಶನಲ್ ಸ್ಕೂಲ 1139/1 ರಿಂದ 1139/3 , ಏರಪೋರ್ಟ ರೋಡ, ಬೆಳಗಾವಿ | 1 ರಿಂದ 8 ನೇ ತರಗತಿವರೆಗೆ ಶಾಶ್ವತ ಅನುದಾನ ರಹಿತವಾಗಿ ಒಂದೊಂದು ವಿಭಾಗಗಳಿಗೆ ಮಾತ್ರ | ಆಂಗ್ಲ | ಸದರಿ ಶಾಲೆಗೆ ಈಗಾಗಲೇ ಪ್ರಥಮ ಮನ್ನಣೆಯನ್ನು ನೀಡಲಾಗಿದ್ದು, ಈಗ 2016-17 ರಿಂದ 2020-21 ನೇ ಸಾಲಿನ ವರೆಗೆ ಶಾಶ್ವತ ಅನುದಾನ ರಹಿತವಾಗಿ ಮನ್ನಣೆ ನವೀಕರಿಸಿದೆ. |

**ಷರತ್ತುಗಳು :**

1. ಈ ಶಾಲೆಯು ಕರ್ನಾಟಕ ಶಿಕ್ಷಣ ಮಸೂದೆ 1983 ನೊಂದಣಿ ನಿಯಮಗಳು 1997 ರನ್ವಯ ಕೂಡಲೇ ನೊಂದಣಿಯನ್ನು ಪಡೆದುಕೊಳ್ಳುವದು.
2. ಕರ್ನಾಟಕ ಶಿಕ್ಷಣ ಕಾಯ್ದೆ 1983 ರ ನಿಯಮಗಳಿಗೆ ಅನುಗುಣವಾಗಿ ಸುಸಜ್ಜಿತವಾದ ಹಾಗೂ ಸ್ವಂತ ಇಮಾರತಿ.,ಆಟದ ಮೈದಾನ.ಪಾಠೋಪಕರಣ ಮತ್ತು ಪೀಠೋಪಕರಣ ಆಡಳಿತ ಮಂಡಳಿಯವರು ಶಾಲೆಗೆ ಪೂರೈಸಿರತಕ್ಕದ್ದು.
3. ಶಾಲೆಯಲ್ಲಿ ಇಲಾಖೆ ನಿಗದಿಪಡಿಸಿದ ಅರ್ಹ ವಿದ್ಯಾರ್ಹತೆ ಹೊಂದಿದ ಅರ್ಹ ಶಿಕ್ಷಕರನ್ನು ಮಾತ್ರ ನೇಮಕಾತಿ ಮಾಡಿಕೊಳ್ಳುವದು.
4. ಇಲಾಖೆಯಿಂದ ಮಾನ್ಯತೆಯನ್ನು ನಿಗದಿತ ಅವಧಿಯಲ್ಲಿ ಪಡೆಯತಕ್ಕದ್ದು. ಮಾನ್ಯತೆ ಇಲ್ಲದೇ ಶಾಲೆ ನಡೆಸಕೂಡದು.

Principal
Podar International School
Airport Road Belgaum-590016

For Podar International School
Manager

NOTARY
Shri S. N. Jelihal
Belagavi
Revenue Taluka
Reg. No. Law 8401
Comm. Exp. Date.
...-9-2020
GOVT. OF INDIA

Scanned with CamScanner

5. ಶಾಲೆಯ ವಾರ್ಷಿಕ ತಪಾಸಣೆಯನ್ನು ಪ್ರತಿ ವರ್ಷ ತಪ್ಪದೆ ಇಲಾಖಾ ಅಧಿಕಾರಿಗಳಿಂದ ಮಾಡಿಸಿಕೊಳ್ಳುವದು ಹಾಗೂ ಪಾಲನಾ ವರದಿಯನ್ನು ಸಕಾಲಕ್ಕೆ ಒಪ್ಪಿಸತಕ್ಕದ್ದು.
6. ಶಾಲೆಯ ಪ್ರತಿ ಸಾಲಿನ ಲೆಕ್ಕಪತ್ರಗಳನ್ನು ಅಧಿಕೃತ ಚಾರ್ಟಡ್ ಅಕೌಂಟೆಂಟ್‌ರವರಿಂದ ತಪಾಸಣೆ ಮಾಡಿ ವರದಿ ನೀಡುವುದು.
7. ವಿಧ್ಯಾರ್ಥಿಗಳ ಶುಲ್ಕವನ್ನು ಶಿಕ್ಷಣ-ಕಾಯ್ದೆಯಂತೆ ರಚಿಸಲಾದ ನಿಯಮಗಳಲ್ಲಿ ನಿಗದಿಪಡಿಸಿದಂತೆ ವಸೂಲು ಮಾಡತಕ್ಕದ್ದು. ಹಾಗೂ ಈ ಬಗ್ಗೆ ಇರುವ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವದು.
8. ಕರ್ನಾಟಕ ಶಿಕ್ಷಣ ಸಂಸ್ಥೆಗಳ ( ವರ್ಗೀಕರಣ , ನಿಯಂತ್ರಣ ಮತ್ತು ಪಠ್ಯಕ್ರಮ ) ನಿಯಮಗಳು 1995 ರಲ್ಲಿ ತಿಳಿಸಿರುವ ಎಲ್ಲಾ ಸೌಲಭ್ಯಗಳನ್ನು ಒದಗಿಸುವದು ಹಾಗೂ ಇಲಾಖೆಯಿಂದ ನಿಗದಿ ಪಡಿಸಿದ ಪಠ್ಯ ಕ್ರಮವನ್ನೇ ಅನುಸರಿಸತಕ್ಕದ್ದು.
9. ಶಾಲೆಯ ಪ್ರತಿಯೊಂದು ತರಗತಿಯಲ್ಲಿ ದಾಖಲಾತಿ 50 ಹಾಗೂ ಹಾಜರಾತಿ 40 ಇರತಕ್ಕದ್ದು.
10. ಕರ್ನಾಟಕ ಸಮಗ್ರ ಶಿಕ್ಷಣ ಮಸೂದೆ ನಿಯಮಗಳನ್ನು ಹಾಗೂ ಇಲಾಖೆಯಿಂದ ಕಾಲಕಾಲಕ್ಕೆ ಹೊರಡಿಸಲಾಗುವ ಆದೇಶಗಳನ್ನು ತಪ್ಪದೇ ಪಾಲಿಸತಕ್ಕದ್ದು.
11. ಸಿಬ್ಬಂದಿಗಳಿಗೆ ಕನಿಷ್ಠ ವೇತನವನ್ನು ಬ್ಯಾಂಕ ಮೂಲಕ ನೀಡತಕ್ಕದ್ದು ಹಾಗೂ ಅವರ ಸೇವಾ ಬದ್ರತೆಗಾಗಿ ಸೇವಾ ಪುಸ್ತಕವನ್ನು ತೆರೆದಿಡತಕ್ಕದ್ದು. ಹಾಗೂ ಪ್ರಾಥಮಿಕ ವಿಭಾಗಕ್ಕೆ ನಿಗದಿಪಡಿಸಿದ ವಿದ್ಯಾರ್ಹತೆಯ ಶಿಕ್ಷಕರನ್ನು ನೇಮಿಸಿಕೊಳ್ಳತಕ್ಕದ್ದು.
12. ಸರ್ಕಾರದ ನಿಯಮದನ್ವಯ ಕಡ್ಡಾಯವಾಗಿ ಅಗ್ನಿ ಶಾಮಕ ಯಂತ್ರವನ್ನು ಶಾಲೆಗೆ ಅಳವಡಿಸತ್ತಕ್ಕದ್ದು.
13. ಶಾಲೆಯನ್ನು ಅನುಮತಿ ನೀಡಿದ ಮಾಧ್ಯಮದಲ್ಲಿಯೇ ನಡೆಸುವದು. ಭಾಷಾ ನೀತಿ ಉಲ್ಲಂಘನೆ ಕಂಡು ಬಂದಲ್ಲಿ ಮಾನ್ಯತೆಯನ್ನು ಹಿಂದಕ್ಕೆ ಪಡೆಯಲಾಗುವದು.
14. ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆ 2009 ರ ನಿಯಮಗಳನ್ನು ಕಡ್ಡಾಯವಾಗಿ ಅನುಸರಸತಕ್ಕದ್ದು.
15. ಅಧಿಕೃತ ಇಂಜಿನಿಯರಗಳಿಂದ ಪಡೆದ ಸುರಕ್ಷತಾ ಪ್ರಮಾಣ ಪತ್ರವನ್ನು ಪ್ರತಿ ವರ್ಷ ಈ ಕಚೇರಿಗೆ ಸಲ್ಲಿಸತಕ್ಕದ್ದು.
16. ಹೆಚ್ಚಿನ ವರ್ಗಗಳನ್ನು ಹಾಗೂ ವಿಭಾಗಗಳನ್ನು ಇಲಾಖೆಯ ಪೂರ್ವಾನುಮತಿ ಇಲ್ಲದೆ ತೆಗೆಯ ತಕ್ಕದ್ದಲ್ಲ.
17. ಸರ್ಕಾರದ ನೀತಿಯನ್ನು ಹಾಗೂ ಅನುಮತಿ ಆದೇಶದಲ್ಲಿ ವಿಧಿಸಿದ ಷರತ್ತಿನನ್ವಯ ಜಂಟಿ ಖಾತೆಯಲ್ಲಿ ಸ್ಥಿರನಿಧಿಯನ್ನು ಇಡುವದು.
18. ಮಕ್ಕಳ ಸುರಕ್ಷತೆ ಬಗ್ಗೆ ಎಲ್ಲಾ ಮುಂಜಾಗ್ರತಾ ಕ್ರಮಗಳನ್ನು ವಹಿಸುವುದು.
19. ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಎಚ್ಚರ ವಹಿಸುವುದು.
20. ಶಾಲೆಯಲ್ಲಿ ಮಕ್ಕಳ ಸಂಖ್ಯೆ ಕಡಿಮೆ ಇದ್ದು, ಈ ಕುರಿತು ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಧಾರವಾಡ ಇವರಿಂದ ದಾಖಲಾತಿ ಮನ್ನಾ ಕಡ್ಡಾಯವಾಗಿ ಪಡೆದುಕೊಳ್ಳಲು ತಿಳಿಸಿದೆ.
21. ಈ ಆದೇಶವನ್ನು ಆಡಳಿತ ಮಂಡಳಿಯವರು ಸಲ್ಲಿಸಿದ ದಾಖಲೆಗಳ ಆಧಾರದ ಮೇಲೆ ನೀಡಿದ್ದು, ಪ್ರಸ್ತಾವಣೆಯಲ್ಲಿ ನೀಡಿದ ಯಾವುದೇ ದಾಖಲೆಗಳು ನಕಲಿ ದಾಖಲೆಗಳೆಂದು ಗಮನಕ್ಕೆ ಬಂದಲ್ಲಿ ಅದಕ್ಕೆ ಸಂಬಂದಿಸಿದ ಶಾಲಾ ಮುಖ್ಯಸ್ಥರು ಮತ್ತು ಆಡಳಿತ ಮಂಡಳಿಯವರೇ ಸಂಪೂರ್ಣ ಜವಾಬ್ದಾರರಾಗಿರುತ್ತಾರೆ.
22. ಪ್ರಸ್ತಾವಣೆಯಲ್ಲಿ ನೀಡಿದ ಯಾವುದೇ ದಾಖಲೆಗಳು ನಕಲಿ ದಾಖಲೆಗಳೆಂದು ಗಮನಕ್ಕೆ ಬಂದಲ್ಲಿ ಈ ಆದೇಶವನ್ನು ಹಿಂದಕ್ಕೆ ಪಡೆಯುವ ಅಧಿಕಾರವನ್ನು ಈ ಕಚೇರಿಯು ಕಾಯ್ದಿರಿಸಿಕೊಂಡಿದೆ.
23. ಈ ಮೇಲಿನಂತೆ ವಿಧಿಸಿದ ಷರತ್ತುಗಳನ್ನು ಪಾಲಿಸಿದ ಬಗ್ಗೆ ಪಾಲನಾ ವರದಿಯನ್ನು ಮುಂದಿನ ಶೈಕ್ಷಣಿಕ ಅವಧಿಗೆ ಮುನ್ನ ಈ ಕಚೇರಿಗೆ ಒದಗಿಸಿ ಮುಂದಿನ ಅವಧಿಗೆ ಮಾನ್ಯತೆಯನ್ನು ಪಡೆದುಕೊಳ್ಳತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಈ ಆದೇಶವನ್ನು ರದ್ದು ಪಡಿಸಲಾಗುವದು.

For Podar International School

Manager

ಕ್ಷೇತ್ರ ಶಿಕ್ಷಣಾಧಿಕಾರಿಗಳು
ನಗರ ವಲಯ ಬೆಳಗಾವಿ

ಕಾರ್ಯದರ್ಶಿಗಳು , ಪೋದಾರ ಎಜ್ಯುಕೇಶನ್ ಟ್ರಸ್ಟ ಬೆಂಗಳೂರು, ಇವರಿಗೆ
ಪ್ರತಿಯನ್ನು ಮುಖ್ಯೋಪಾದ್ಯಾಯರು, ಪೋದಾರ ಇಂಟರನ್ಯಾಶನಲ್ ಸ್ಕೂಲ, ಏರಪೋರ್ಟ ರೋಡ, ಬೆಳಗಾವಿ ಇವರಿಗೆ

TRUE COPY

Shri S. N. Jalihal
Belagavi
Revenue Distt.
Reg. No. Law
Comm. Exp. Date
21-6-2020
GOVT. OF INDIA

SURESH. N. JALIHAL
B.Com., LL.B. (Spl)
Advocate & Notary
BELAGAVI.

Principal
Podar International School
Airport Road Belgaum-590016

22 MAR 20..

Scanned with CamScanner